ಇ) ಕುದುರೆಮುಖ ಅಭಯಾರಣ್ಯದಲ್ಲಿ ನೆಲೆಸಿರುವ ಅನಧಿಕೃತ 201 ಬುಡಕಟ್ಟು ಜನಾಂಗದ ಸಂಸಾರಗಳನ್ನು ಗುರುತಿಸಿ ಅವರಿಗೆ ಪರ್ಯಾಯವಾಗಿ ನೆಲೆಗೊಳಿಸಲು 23 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲು ಕೇಂದ್ರ ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದೆ. ಆದಾಗ್ಯೂ ಕುದುರೆಮುಖ ಅಭಯಾರಣ್ಯ ಪ್ರದೇಶದಿಂದ ಬಲವಂತವಾಗಿ ಯಾರನ್ನು ಒಕ್ಕಲೆಬ್ಬಿಸದಿರಲು ಸರ್ಕಾರ ನಿರ್ಧರಿಸಿದೆ. ಅರಣ್ಯ ಕಾಯ್ದೆಗಳಿಗೆ ಸಮಗ್ರ ತಿದ್ದುಪಡಿಗಳನ್ನು ತರಲು ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರವು ಒತ್ತಡ ತರುತ್ತಿದ್ದು ಇದರಿಂದ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನಾಂಗದವರಿಗೆ ಮೂಲಭೂತ ಸೌಕರ್ಯ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗಿದೆ.

**4325 (5221) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) :-** ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಗರ ತಾಲ್ಲೂಕು, ಕರೂರು – ಬಾರಂಗಿ ಹೋಬಳಿಯ ಕೆಲವು ಮುಳುಗಡೆಯ ಊರುಗಳಲ್ಲಿ ಸಣ್ಣ ದೋಣಿಗಳ ಅವಶ್ಯಕತೆಯಿದ್ದು, ಯಾವುದೇ ಮೂಲಭೂತ ಸೌಕರ್ಯಗಳನ್ನು ಇದುವರೆವಿಗೂ ಒದಗಿಸದಿರಲು ಕಾರಣಗಳೇನು;

ಆ) ಈ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ; (ವಿವರ ನೀಡುವುದು);

ಇ) ಡ್ಯಾಂಹೊಸೂರಿನಲ್ಲಿ ಡ್ಯಾಂನಿಂದ ಗೌತಮಪುರದ ಬಹಳಷ್ಟು ಜಮೀನು ಮುಳುಗಡೆಯಾಗಿದ್ದು, ಇದುವರೆಗೂ ಪರಿಹಾರ ಬಿಡುಗಡೆಯಾಗಿರುವುದಿಲ್ಲ ಕಾರಣವೇನು;

ಈ) ಹಾಗಿದ್ದಲ್ಲಿ, ಪರಿಹಾರ ಯಾವಾಗ ನೀಡಲಾಗುತ್ತದೆ;

ಉ) ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ಬೆಳೆ ಬೆಳೆದರೆ ಭಾರಿ ನೀರಾವರಿ ಇಲಾಖೆಯವರು ಅಮಾಯಕರನ್ನು ಬಂಧಿಸುತ್ತಾರೆ. ಇದಕ್ಕೆ ಪರಿಹಾರವೇನು; ಇದರ ಬಗ್ಗೆ ಸರ್ಕಾರ ತೆಗೆದುಕೊಂಡ ತೀರ್ಮಾನ ಏನು; (ವಿವರ ಒದಗಿಸುವುದು)?

**ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):**

ಅ) ಈ ಮುಳುಗಡೆಯ ಊರುಗಳು ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಭೂಸ್ವಾಧೀನದ ಸಂಬಂಧ ಭಾಗಶಃ ಮೊತ್ತವನ್ನು ಕಂದಾಯ ಇಲಾಖೆಗೆ ಠೇವಣಿ ಮಾಡಲಾಗಿದೆ. ಪೂರ್ಣ ಮೊಬಲಗನ್ನು ಭರಿಸದ ಕಾರಣ ಭೂ ಪರಿಹಾರ ಬಿಡುಗಡೆಯಾಗಿರುವುದಿಲ್ಲ.

ಈ) 2005–06ನೇ ಸಾಲಿನಲ್ಲಿ ಬಾಕಿ ಮೊಬಲಗನ್ನು ಭರಿಸಿದ ನಂತರ ಭೂ ಪರಿಹಾರವನ್ನು ಸಂದಾಯ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಉ) ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ಬೆಳೆ ಬೆಳೆದವರನ್ನು ಬಂಧಿಸಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

**4326 (4940) ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ (ಕುಂದಾಪುರ) :–** ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾರಾಹಿ ನೀರಾವರಿ ಯೋಜನೆಯ ವೆಚ್ಚ ಎಷ್ಟು; ಈ ಯೋಜನೆಯನ್ನು ಪೂರ್ತಿಗೊಳಿಸಲು ಸರ್ಕಾರ ಉದ್ದೇಶಿಸಿರುವ ಸಮಯವೆಷ್ಟು;

ಆ) ನಿಗದಿತ ಸಮಯದಲ್ಲಿ ಪೂರ್ತಿಗೊಳಿಸಲು ವಿಳಂಬವಾಗಲು ಕಾರಣವೇನು; ಈ ಯೋಜನೆ ಯಾವಾಗ ಪ್ರಾರಂಭವಾಗಿದೆ; ಈ ಯೋಜನೆ ಕಾರ್ಯಗತವಾಗದೇ ಇರುವುದಕ್ಕೆ ಹೊಣೆಗಾರರು ಯಾರು ; (ವಿವರ ನೀಡುವುದು);

ಇ) ಈ ಯೋಜನೆ ಪೂರ್ತಿಗೊಳಿಸಲು ಎಷ್ಟು ಹಣ ಬೇಕಾಗುವುದೆಂದು ಅಂದಾಜಿಸಲಾಗಿದೆ ಮತ್ತು ಯಾವಾಗ ಪೂರ್ತಿಗೊಳಿಸಲು ಉದ್ದೇಶಿಸಲಾಗಿದೆ;